# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ:36 ಮತ್ತಿಕೆರೆ
ಕಛೇರಿಯಲ್ಲಿ ದಿನಾಂಕ:04-02-2022 ರಂದು ನಡೆದ ಮೀಟಿಂಗ್ ನಡವಳಿಗಳು

**ವಿಷಯ :** ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

**ಉಲ್ಲೇಖ :** 1. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20–21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07–05–2021

3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :03–2–2022

---

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ: ರಂದು ಮತ್ತಿಕೆರೆ ವಾರ್ಡ್ ನಂ.36ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಟಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 11-30 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

**ಚರ್ಚಿಸಲಾದ ವಿಷಯಗಳು ಮತ್ತು ನಿರ್ಣಯಗಳು:**

1. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಟೆಂಡರ್ ಕರೆದಿದ್ದು, ಕಸ ವಿಲೇವಾರಿ ಮಾಡುವ ಆಟೋಗಳಿಗೆ ಜಿ.ಪಿ.ಎಸ್ ಅಳಡಿಸಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಕಸ ವಿಲೇವಾರಿ ಆಟೋಗಳು ಬೆಳಿಗ್ಗೆ 6-30ರ ನಂತರ ಬರಲು ಸಾರ್ವಜನಿಕರು ಕೋರಿರುತ್ತಾರೆ. ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

2. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ರಾತ್ರಿ ವೇಳೆಯಲ್ಲಿ ಕಸವನ್ನು ಸುರಿಯುತ್ತಿರುವುದರಿಂದ, ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿರುತ್ತದೆ. ಈ ಬಗ್ಗೆ ಕ್ರಮವಹಿಸುವುದು ಹಾಗೂ ಒಂದು ತಿಂಗಳಲ್ಲಿ ಬೂಸಾ ಫ್ಯಾಕ್ಟರಿ ಹತ್ತಿರ ಇರುವ ಬ್ಲಾಕ್ ಸ್ಪಾಟ್‌ನ್ನು ತೆರವುಗೊಳಿಸಲು, ಅಧ್ಯಕ್ಷರು ಅಧಿಕಾರಿಗಳಿಗೆ ತಿಳಿಸಿದರು.

3. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಒಟ್ಟು 1 ಕೋವಿಡ್ ಕೇಸ್ ಪತ್ತೆಯಾಗಿರುತ್ತದೆ ಹಾಗೂ ಡಾಕ್ಟರ್‌ಗಳು, ಸ್ಟಾಫ್ ನರ್ಸ್‌ಗಳು ವ್ಯಾಕ್ಸಿನೇಷನ್ ಪಡೆಯಲಾಗಿರುತ್ತದೆ ಎಂದು ಆರೋಗ್ಯಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

4. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖಾವತಿಯಿಂದ UG Cable ಹಾಗೂ RMU ಯನ್ನು ಅಳವಡಿಸಲು ಪಾಲಿಕೆ ರಸ್ತೆ ಅಗೆದು ನ್ಯೂನತೆಗಳನ್ನು ಸರಿಪಡಿಸದೇ ಇರುವುದು ಕಂಡುಬಂದಿರುತ್ತದೆ.

ಮು.ತಿ.ನೋ

5. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖಾವತಿಯಿಂದ ಕಾಮಗಾರಿ ನಡೆಸುತ್ತಿದ್ದು, ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿದಲ್ಲಿ, ಕಾಮಗಾರಿ ಇಲಾಖೆಯಿಂದ ಪ್ಯಾಚ್‌ವರ್ಕ್ ಮಾಡಲಾಗುವುದು ಎಂದು ಸಭೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ತಿಳಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

(ಸುಷ್ಮಾ)
ಸದಸ್ಯ ಕಾರ್ಯದರ್ಶಿ,
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಜೆ.ಬಿ.ಶ್ರೀಧರ್ ಮೂರ್ತಿ)).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.